## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಶ್ರೀನಿವಾಸಪುರ

**ಪಿಸಿಆರ್ ಸಂಖ್ಯೆ:78/2025** **CW-1**

| | |
|---|---|
| ಹೆಸರುಃ | ರಾಮಚಂದ್ರರೆಡ್ಡಿ |
| ತಂದೆಯ ಹೆಸರುಃ | ಸುಬ್ಬಾರೆಡ್ಡಿ |
| ವಯಸ್ಸುಃ | 74 ವರ್ಷ |
| ವೃತ್ತಿಃ | ನಿವೃತ್ತ ಬಿ ಎಂ ಟಿ ಸಿ ನೌಕರರು |
| ವಾಸ ಸ್ಥಳಃ | ಬೆಂಗಳೂರು |

**ದಿಃ08.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ದೂರುದಾರರ ಹೇಳಿಕೆಃ**

ಮೃತ ಕೃಷ್ಣಾರೆಡ್ಡಿ ನನ್ನ ದೊಡ್ಡಪ್ಪನ ಮಗ. ಆರೋಪಿತರು ಕೃಷ್ಣಾರೆಡ್ಡಿರವರ ವಾರಸುದಾರರು. ರೆಡ್ಡಿವಾರಿಪಲ್ಲಿ ಗ್ರಾಮದಲ್ಲಿ ನಮ್ಮ ಮನೆ ಹಾಗೂ ಆರೋಪಿತರ ಮನೆ ನಡುವೆ ಓಡಾಡಲು ದಾರಿ ಇರುತ್ತದೆ. ಆ ದಾರಿಯನ್ನು ಆರೋಪಿತರು ನನಗೆ ಬಳಸಲು ಬಿಡದೇ ಗಲಾಟೆ ಮಾಡುತ್ತಿದ್ದರು. ಅದಲ್ಲದೆ ರೆಡ್ಡಿವಾರಿಪಲ್ಲಿ ಗ್ರಾಮದ ಸರ್ವೇನಂಬರ್ 11/3 ಮತ್ತು ಕೂರಿಗೆಪಲ್ಲಿ ಗ್ರಾಮದ ಸರ್ವೇನಂಬರ್ 5/4 ಜಮೀನುಗಳಿಗೆ ಗಲಾಟೆಗಳಿದ್ದು ಆರೋಪಿತರು ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ:78/2016 ರಲ್ಲಿ ದಾವೆ ಹೂಡಿದ್ದಾರೆ.

ದಿಃ18.11.2024 ರಂದು ಮಧ್ಯಾಹ್ನ 11.30 ರ ಸಮಯದಲ್ಲಿ ನಾನು ನಮ್ಮ ಮನೆಯ ಹಿಂಭಾಗಕ್ಕೆ ಹೋದಾಗ ಆರೋಪಿತರು ನನ್ನೊಂದಿಗೆ ಗಲಾಟೆ ಮಾಡಿ ನನಗೆ ಅವ್ಯಾಚ್ಯ ಶಬ್ದಗಳಿಗಂದ ಬೈದಾಡಿದ್ದರು. 2 ನೇ ಆರೋಪಿ ನನ್ನ ಎರಡೂ ಕೈಗಳನ್ನು ಹಿಡಿದುಕೊಂಡಿದ್ದು 1 ನೇ ಆರೋಪಿ ನನಗೆ ಕೈಯಿಂದ ತಲೆಯ ಮೇಲೆ ಹೊಡೆದು ನೋವು ಪಡಿಸಿದ್ದರು. ಇಬ್ಬರೂ ಆರೋಪಿತರು ನನಗೆ ನೆಲಕ್ಕೆ ತಳ್ಳಿ ಕಾಲಿನಿಂದ ಒದ್ದು ನೋವು ಪಡಿಸಿದ್ದರು. 1 ನೇ ಆರೋಪಿ ಒಂದು ಕಲ್ಲನ್ನು ತೆಗೆದು ನನ್ನ ಹಲ್ಲೆ ಮಾಡಲು ಬೀಸಿದ್ದು ನಾನು ತಪ್ಪಿಸಿಕೊಂಡಿದ್ದು ಆ ಕಲ್ಲು ನನ್ನ ಬಲಗಾಲಿಗೆ ಬಿದ್ದು ನನಗೆ ರಕ್ತಗಾಯವಾಗಿತ್ತು. 3 ನೇ ಆರೋಪಿರವರ ಮಕ್ಕಳಾದ 1 ಮತ್ತು 2 ನೇ ಆರೋಪಿತರನ್ನು ನನ್ನನ್ನು ಕೊಲೆ ಮಾಡುವಂತೆ ನಿರ್ದೇಶಿಸಿದ್ದರು. ಆರೋಪಿತರು ನನಗೆ ಮತ್ತೊಮ್ಮೆ ಗ್ರಾಮಕ್ಕೆ ಬಂದರೆ ಜೀವಂತ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದರು. ಆರೋಪಿತರು ನನಗೆ ದಾವೆಗಳನ್ನು

ಹಿಂಪಡೆಯಬೇಕೆಂದು ಬೆದರಿಸಿದ್ದರು. ಅಲ್ಲಿಯೇ ಗಂಗಪಾಪಮ್ಮ ಮತ್ತು ರಾಮಚಂದ್ರಪ್ಪರವರು ಗಲಾಟೆ ಬಿಡಿಸಿದ್ದರು. ಅಲ್ಲಿಂದ ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಗೆ ಬಂದು ನಾನು ಚಿಕಿತ್ಸೆ ಪಡೆದಿದ್ದೆ. ಪೊಲೀಸರು ಆಸ್ಪತ್ರೆಗೆ ಬಂದು ನನ್ನನ್ನು ವಿಚಾರಿಸಿದ್ದರು. ನಾನು ಪೊಲೀಸರಿಗೆ ಈ ವಿಷಗಳನ್ನೆಲ್ಲಾ ತಿಳಿಸಿದ್ದೆ. ಮರುದಿನ ಅಂದರೆ ದಿಃ19.11.2024 ರಂದು ನಾನು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದೆ. ದಿಃ20.11.2024 ರಂದು ನಾನು ರಾಯಲ್ಪಾಡು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ್ದೆ, ಆದರೆ ಅವರು ನನ್ನ ದೂರನ್ನು ಪಡೆದುಕೊಂಡಿಲ್ಲ. ನಾನು ನನ್ನ ದೂರನ್ನು ಅಂಚೆ ಮೂಲಕ ವೃತ್ತ ನಿರೀಕ್ಷಕರು ಶ್ರೀನಿವಾಸಪುರ, ಆರಕ್ಷಕ ಉಪಾಧೀಕ್ಷಕರು ಮುಳಬಾಗಿಲು ಉಪ ವಿಭಾಗ ಮತ್ತು ಎಸ್ ಪಿ ಕೋಲಾರ್ ರವರಿಗೆ ಸಹಾ ಕಳುಹಿಸಿದ್ದೆ. ಆದರೆ ನನ್ನ ದೂರಿನ ಮೇಲೆ ಪೊಲೀಸರು ಯಾವುದೇ ಕ್ರಮ ಕೈಗೊಳ್ಳಲಿಲ್ಲ, ಹಾಗಾಗಿ ಈ ಖಾಸಗಿ ದೂರನ್ನು ಸಲ್ಲಿಸಿದ್ದೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

| | |
|---|---|
| ನಿಪಿ-1 | ದಿಃ03.12.2024 ರಂದು ನೀಡಿರುವ ದೂರಿನ ಪ್ರತಿ |
| ನಿಪಿ-2 ರಿಂದ 5 | ಅಂಚೆ ರಸೀದಿಗಳು |
| ನಿಪಿ-6 ರಿಂದ 9 | ಅಂಚೆ ಸ್ವೀಕೃತಿಗಳು |

ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ನ್ಯಾಯಾಲದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

(ಕರ್ನ ಸಿಂಗ್ ಆರ್.ಯು)
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಶ್ರೀನಿವಾಸಪುರ**